ನಿಯಮ ೩೫೪ರ ಮೇರೆಗೆ

ಸುಳ್ಯ ತಾಲ್ಲೂಕ್ ಅಮರ ಮೂಡ್ನೂರು ಗ್ರಾಮದಲ್ಲಿ ಶ್ರೀ ಚನಿಯಮೇರ ಅವರ ಮನೆಯನ್ನು ದುಷ್ಕರ್ಮಿಗಳು ಹಾಳು ಮಾಡಿರುವುದು

ಶ್ರೀ ಕೆ. ಕುಶಾಲ.—ಸುಳ್ಯ ತಾಲ್ಲೂಕಿನ ಅಮರ ಮೂಡ್ನೂರು ಗ್ರಾಮದಲ್ಲಿ ಕೆಲವು ವರ್ಷಗಳಿಂದ ಶ್ರೀ ಚನಿಯಮೇರ ಎಂಬುವರು ವಾಸ್ತವಿಸಿಕೊಂಡು ಬರುತ್ತಿದ್ದು, ಸದ್ರಿಯವರು ಪರಿಶಿಷ್ಟ ಜಾತಿಯವರಾಗಿರುತ್ತಾರೆ. ಇವರು ಅತೀ ಬಡತನದಿಂದ ಕೃಷಿ ಕೂಲಿ ಕೆಲಸ ಮಾಡಿ ಜೀವಿಸಿಕೊಂಡು ಬರುತ್ತಿರುವರು. ಬಡತನದಿಂದ ಹಾಗೂ ಕಷ್ಟ ದುಡಿತದಿಂದ, ನಿರ್ಮಿಸಿದ ವಾಸ್ತವ್ಯದ ಮನೆಯನ್ನು ತಾ. ೧೬-೬-೧೯೯೦ ರಂದು ರಾತ್ರಿ ಸದರಿ ಗ್ರಾಮದ ಶ್ರೀ ಗೋಪಣ್ಣಗೌಡ ಮತ್ತು ಅದೇ ಗ್ರಾಮದ ಕೆಲವು ಗೂಂಡಾಗಳು ಹಾಗೂ ಸುಳ್ಯ ಪೋಲೀಸು ಠಾಣೆಯ ಕೆಲವರು ಪೋಲೀಸು ಸಿಬ್ಬಂದಿಗಳು ಈ ಗೂಂಡಾಗಳಿಗೆ ಸಹಾಯ ನೀಡಿ, ಸ್ಥಳದಲ್ಲಿ ಪೋಲೀಸರು ಕೆಲವರು ಹಾಜರಿದ್ದು, ಶ್ರೀ ಚನಿಯಮೇರ ಎಂಬುವರ, ಮನೆಯನ್ನು ಬಲತ್ಕಾರವಾಗಿ ಕೆಡವಿಹಾಕಿ ಬೀದಿಪಾಲು ಮಾಡಿರುತ್ತಾರೆ. ಶ್ರೀ ಚನಿಯಮೇರ ಹಾಗೂ ಆತನ ಕುಟುಂಬದವರು ಈ ಮಳೆ ಗಾಲದಲ್ಲಿ ಬೀದಿ ಪಾಲಾಗಿರುತ್ತಾರೆ. ಈ ಗೋಪಣ್ಣಗೌಡ ಎಂಬುವವರಿಗೆ ಪೋಲೀಸ್ ಸಿಬ್ಬಂದಿಗಳು ಮನೆಯನ್ನು ಕೆಡವಲು, ಶಾಮೀಲಾಗಿ ಸಹಾಯ ಮಾಡಬೇಕಾದರೆ ಕಂದಾಯ ಇಲಾಖೆಯವರು ಜಮೀನಿನ ಬಗ್ಗೆ ನಿರ್ದೇಶನ ನೀಡಲಾಗಿಲ್ಲ ಎಂದು ಕೂಡ ತಿಳಿದು ಬರುವುದು. ಆದುದರಿಂದ, ಶ್ರೀ ಚನಿಯಮೇರ ಮತ್ತು ಕುಟುಂಬದವರಿಗೆ ರಕ್ಷಣೆ ಹಾಗೂ ತೀವ್ರ ಪರಿಹಾರ ನೀಡುವುದು. ಆಲ್ಲದೆ, ಶ್ರೀ ಗೋಪಣ್ಣಗೌಡ ಹಾಗೂ ಈ ಗೂಂಡಾಗಳು ಗ್ರಾಮದಲ್ಲಿ ಹಲವಾರು ಪ್ರಕರಣದಲ್ಲಿ ಭಾಗಿಯಾಗಿದ್ದರೂ, ಪೋಲೀಸು ಇಲಾಖೆ ಕ್ರಮ ಕೈಕೊಂಡಿಲ್ಲ. ಕಾರಣ ಪೋಲೀಸಿನವರೆ. ಈ ಗೂಂಡಾಗಳ ಜೊತೆ ಶಾಮೀಲಾಗಿರುತ್ತಾರೆ. ಈ ಕಾರಣೀಭೂತರ ಮೇಲೆ ಸರಕಾರ ಕೂಡಲೇ ಕ್ರಮ ಕೈಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಕೆ. ಕುಶಾಲ ರವರು, ಪ್ರಸ್ತಾಪಿಸಿರತಕ್ಕ ಸ್ಥಳೀಯ ಸಮಸ್ಯೆಯ ಬಗ್ಗೆ ಸರ್ಕಾರದ ಒಂದು ಹೇಳಿಕೆಯನ್ನು ತಮ್ಮ ಅನುಮತಿ ಮೇರೆಗೆ ಸನ್ಮಾನ್ಯ ಸದಸ್ಯರ ಮತ್ತು ಈ ಸಭೆಯ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ.

ದಿನಾಂಕ ೧೬-೬-೧೯೯೦ ರಂದು ಶ್ರೀ ಕುಶಾಲಪ್ಪಗೌಡ, ಅಮರ ಮುಡ್ನೂರ್ ಗ್ರಾಮ ಸುಳ್ಯ ತಾಲ್ಲೂಕು ಇವರು ಸಂಳ್ಯ ಪೋಲೀಸ್ ಠಾಣೆಗೆ ಶ್ರೀ ಗುರುವ ಮೇರ, ಚನಿಯಾ ಮೇರ ಮತ್ತು ಗುರುವ ಮೇರ ಅಂಗಾರ ಮೇರ ಇವರುಗಳ ಮೇಲೆ ದೂರೊಂದನ್ನು ಸಲ್ಲಿಸಿ ತನಗೆ ಸಂಬಂಧಿಸಿದ ಜಮೀನಿನಲ್ಲಿ ಅಕ್ರಮವಾಗಿ ಮನೆಯನ್ನು ಮೇಲ್ನೋಟಕ್ಕೆ ಕಟ್ಟುತ್ತಿರುವುದನ್ನು ತಿಳಿಸಿರುತ್ತಾರೆ. ಅದೇ ದಿನ ಸುಳ್ಯ ಠಾಣೆಯ ಮುಖ್ಯ ಪೇದೆಯೊಬ್ಬರು ತನಿಖೆ ನಡೆಸಲಾಗಿ ಅಲ್ಲಿ ಯಾವುದೇ ಮನೆಯು ಈ ಮುಂಚೆ ಇಲ್ಲದಿರುವುದು ಕಂಡು ಬಂದಿದ್ದು, ಆದರೆ ಹತ್ತು ಆಡಿ ಅಗಲ ೫೦ ಆಡಿ ಉದ್ದಕ್ಕೆ ಮಣ್ಣು ತೆಗೆದು ೪ ಕಾಲ್ಕುವಂರಗಳನ್ನು ನೆಟ್ಟಿರುವುದು ಕಂಡು ಬಂದಿದೆ. ಹಾಗೆಯೇ ಈ ಜಾಗವು ಆರ್ಜಿದಾರರಾದ ಶ್ರೀ ಕುಶಾಲಪ್ಪಗೌಡರಿಗೆ ಸಂಬಂಧಿಸಿದ್ದೆಂದು ತಿಳಿದು ಬಂದಿದೆ. ಈ ವಿಷಯವು ಸಿವಿಲ್ ವಿಷಯಕ್ಕೆ ಸಂಬಂಧಪಟ್ಟಿದ್ದರಿಂದ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಬಗೆಹರಿಸಿಕೊಳ್ಳಲು ಮುಖ್ಯ ಪೇದೆಯವರು ಸಲಹೆ ಮಾಡಿರುತ್ತಾರೆ.

ದಿನಾಂಕ. ೫-೬-೧೯೯೦ ರಂದು ಶ್ರೀ ಬೀನಿಯಾ ಮೇರ ಇವರು ಸುಳ್ಯ ಪೋಲೀಸ್ ಠಾಣೆಗೆ ದೂರು ಸಲ್ಲಿಸಿ ಶ್ರೀ ಗೋಪಣ್ಣಗೌಡ, ಶ್ರೀ ವೀರಪ್ಪಗೌಡ, ಕುಶಾಲಪ್ಪಗೌಡ, ಶ್ರೀ ಬಾಲಚಂದ್ರ ಹಾಗೂ ಶ್ರೀ ಶಿವ ಇವರುಗಳು ಮನೆಯನ್ನು ಕೆಡವಿರುವ ಹಾಗೂ ಮನೆಯಲ್ಲಿಯ ವಸ್ತುಗಳನ್ನು ಕದ್ದಿದ್ದು ತನಗೆ ಭಯ ಹುಟ್ಟಿಸಿರುತ್ತಾರೆಂದು ತಿಳಿಸಿರುತ್ತಾರೆ. ಈ ಕುರಿತು ಸುಳ್ಯ ಪೋಲೀಸ್ ಠಾಣೆ ಅಪರಾಧ ಸಂಖ್ಯೆ ೧೮೪-೯೦ ರಲ್ಲಿ ಮೊಕದ್ದಮೆ ನೊಂದಾಯಿಸಿಕೊಂಡು ಅಂದೇ ಸ್ಥಳ ತನಿಖೆ ಮಾಡಲಾಗಿ ಈ ಹಿಂದೆ ದಿನಾಂಕ. ೧-೬-೧೯೯೦ರ ಪರಿಸ್ಥಿತಿಯೇ ಕಂಡು ಬಂದಿದೆ. ಯಾವುದೇ ಮನೆಯನ್ನು ನಾಶಪಡಿಸಿರುವುದು ಕಂಡುಬಂದಿಲ್ಲ. ಆದರೆ ಶ್ರೀ ಕುಶಾಲಪ್ಪ ಗೌಡರ ಜಾಗದಲ್ಲಿ ಬೆನಿಯಾ ಮೇರಾ ಇವರ ತಮ್ಮ ಮತ್ತು ಆತನ ಭಾವ ಮೈದುನರು ಶ್ರೀ ಚನಿಯಾ ಮೇರಾರವರಿಗೆ ಮನೆಯನ್ನು ಅಕ್ರಮವಾಗಿ ಕಟ್ಟಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಈ ಬಗ್ಗೆ ತಹಸೀಲ್ದಾರ್ ಸುಳ್ಯ ಇವರಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಯನ್ನು ನಡೆಸಲು ಕೋರಲಾಗಿ ತಹಸೀಲ್ದಾರ್‌ರವರು ಸಂಬಂಧಪಟ್ಟವರಿಗೆ ನೋಟೀಸ್‌ಗಳನ್ನು ಕೊಟ್ಟಿದ್ದು ಸರ್ವೇ ಮಾಡುವ ಸಮಯದಲ್ಲಿ ಸ್ಥಳದಲ್ಲಿರುವಂತೆ ನಿರ್ದೇಶಿಸಿರುತ್ತಾರೆ. ಸರ್ವೇಯರು ಮತ್ತು ಕಂದಾಯ ನಿರೀಕ್ಷಕರು ಸ್ಥಳ ಪರಿವೀಕ್ಷಣೆ ನಡೆಸಿದ್ದು, ಸಂಬಂಧಪಟ್ಟವರ ಹೇಳಿಕೆ ಪಡೆದಿರುತ್ತಾರೆ.

ಈ ಹಿಂದೆ ಶ್ರೀ ಗೋಪಣ್ಣಗೌಡರವರ ಮೇಲೆ ಯಾವುದೇ ಮೊಕದ್ದಮೆಯನ್ನು ಸುಳ್ಳ ಆರಕ್ಷಕ ಠಾಣೆಯಲ್ಲಿ ನೊಂದಾಯಿಸಿಕೊಂಡಿರುವುದು ಕಂಡು ಬಂದಿಲ್ಲ. ಶ್ರೀ ಸೂರ್ಯನಾರಾಯಣ ಭಟ್ ಎಂಬುವರ ಮನೆಯಲ್ಲಿ ಶ್ರೀ ಚನಿಯಾ ಮೇರಾ ಹಾಗೂ ಆತನ ಸಹೋದರರು ಕೆಲಸ ಮಾಡುತ್ತಿದ್ದು, ಶ್ರೀ ಭಟ್‌ರವರು ಕಾಂಗ್ರೆಸ್ (ಐ) ಸದಸ್ಯರಾಗಿದ್ದು ಗೋಪಣ್ಣಗೌಡ ಮತ್ತು ವೀರಪ್ಪಗೌಡರು ಬಿ.ಜೆ.ಪಿ. ಬೆಂಬಲಿಗರಾಗಿರುತ್ತಾರೆ. ಈ ವಿವಾದವು ಕರಣಪಾಜೆ ಸೂರ್ಯನಾರಾಯಣ ಭಟ್‌ರವರಿಂದ ಪ್ರಚೋದಿತವಾಗಿರುವುದಾಗಿ ತಿಳಿದು ಬಂದಿದೆ.

ಈಗ ಅಲ್ಲಿ ಶಾಂತಿ ಪರಿಸ್ಥಿತಿ ಇದ್ದು, ಎ. ಎಸ್. ಪಿ. ಪುತ್ತೂರು ಇವರಿಗೆ ವಿಚಾರಣೆ ನಡೆಸಲು ವಹಿಸಿದ್ದು, ವಿಚಾರಣೆಯ ವರದಿ ಬಂದ ನಂತರ ಸುಳ್ಳ ಠಾಣೆಯ ಅಧಿಕಾರಿಗಳು ಅಸಂಬದ್ಧವಾಗಿ ನಡೆದು ಕೊಂಡಲ್ಲಿ ನಿಯಮಾನುಸಾರ ಕ್ರಮಕ್ಕೆ ಗೊಳ್ಳಲಾಗುವುದು.

೨. ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಚಚಡಿ ಗ್ರಾಮದಲ್ಲಿರುವ ಖಾಸಗೀ ಪ್ರೌಢಶಾಲೆಯನ್ನು ಸರ್ಕಾರವೇ ವಹಿಸಿಕೊಳ್ಳುವಂತೆ ಒತ್ತಾಯ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಚಚಡಿ ಗ್ರಾಮದಲ್ಲಿರುವ ಖಾಸಗೀ ಪ್ರೌಢಶಾಲೆಯನ್ನು ಅಲ್ಲಿಯ ಆಡಳಿತ ವರ್ಗದವರು ಒಳ್ಳೆಯ ರೀತಿಯಿಂದ ನಡೆಸದಿದ್ದ ಕಾರಣ ಹಾಗೂ ವಿದ್ಯಾರ್ಥಿಗಳಿಗೆ ಯಾವುದೇ ಸೌಲಭ್ಯ ಒದಗಿಸಿಲ್ಲದ ಕಾರಣದಿಂದ ಆ ಶಾಲೆಯ ವಿದ್ಯಾರ್ಥಿಗಳು ಳನೇ ತಾರೀಖಿನಿಂದ ಶಾಲೆಯನ್ನು ಬಹಿಷ್ಕರಿಸಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಸರಕಾರ ಕೂಡಲೇ ಕ್ರಮ ಕೈಗೊಂಡು ಈ ಶಾಲೆಯನ್ನು ಸರಕಾರವೇ ವಹಿಸಿಕೊಂಡು ಅಲ್ಲಿನ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ವಿನಂತಿ ಸುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ (ಪೌನ್ಯ ವಿದ್ಯಾ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡುತ್ತೇನೆ).—ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಚಚಡಿ ಗ್ರಾಮದಲ್ಲಿರುವ ಶಾಲೆಯ ವಿದ್ಯಾರ್ಥಿಗಳು ಶಾಲೆಯನ್ನು ಬಹಿಷ್ಕರಿಸಿರುವ ಬಗ್ಗೆ ಯಾವುದೇ ಅರ್ಜಿಗಳು ಬಂದಿರುವುದಿಲ್ಲ. ಇದರ ಬಗ್ಗೆ ಈ ದಿನ ಅಂದರೆ ದಿನಾಂಕ ೭-೬-೮೦ರಂದು ಉಪ ನಿರ್ದೇಶಕರಿಗೆ ದೂರವಾಣಿ ಮುಖಾಂತರ ತಿಳಿಸಿ ಈ ಶಾಲೆಗೆ ತಕ್ಷಣ ಭೇಟಿ ನೀಡಿ ಅಲ್ಲಿನ ಸಮಸ್ಯೆಯನ್ನು ಬಗೆಹರಿಸಲು ತಿಳಿಸಲಾಗಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಶಾಲೆ ಬಂದ್ ಆಗಿದೆ ಎಂದು ಮ್ಯಾನೇಜ್‌ಮೆಂಟ್‌ನವರು ನನಗೆ ಪತ್ರ ಬರೆದಿದ್ದಾರೆ ಅದನ್ನು ತಮಗೆ ಕಳಿಸುತ್ತೇನೆ. ತಾವು ಬಂದ್ ಆಗಿಲ್ಲವೆಂದು ಹೇಳುತ್ತಿದ್ದೀರಿ ತಾವು ಕೊಟ್ಟಂಥ ಉತ್ತರ ಸರಿ ಇಲ್ಲ. ಈ ಶಾಲೆಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ನಿರ್ದೇಶಕರಿಗೆ ದೂರವಾಣಿ ಮುಖಾಂತರ ತಿಳಿಸಿದ್ದೇನೆ ಆವರು ಹೋಗುತ್ತಿದ್ದಾರೆ ಆದಕ್ಕಿಂತ ಹೆಚ್ಚು ಏನು ಹೇಳುವುದು.

೩. ಮಾವಿನಹಣ್ಣು ವ್ಯಾಪಾರಿಗಳು ಅಪಕ್ವ ಮಾವಿನ ಕಾಯಿಗಳನ್ನು ತಂದು ಕಾರ್ಬೈಡ್ ಎಂಬ ರಾಸಾಯನಿಕ ಪದಾರ್ಥದಿಂದ ಕಾಯಿಗಳನ್ನು ಹಣ್ಣು ಮಾಡಿದ್ದರ ಪರಿಣಾಮವಾಗಿ ಸಾರ್ವಜನಿಕರು ಸಾಂಕ್ರಾಮಿಕ ರೋಗಗಳಿಗೆ ತುತ್ತಾಗಿರುವುದು.

ಶ್ರೀ ಟಿ. ಬಿ. ಜಯಚಂದ್ರ.—ಮಾವಿನ ಹಣ್ಣು ವ್ಯಾಪಾರಿಗಳು ಅಪಕ್ವ ಮಾವಿನ ಕಾಯಿಗಳನ್ನು ತಂದು ಅದಕ್ಕೆ ಬೆಸುಗೆ ಮಾಡುವುದಕ್ಕಾಗಿ ಉಪಯೋಗಿಸುವ ಕಾರ್ಬೈಡ್ ಎಂಬ ರಾಸಾಯನಿಕ ಪದಾರ್ಥವನ್ನು ಪುಡಿ ಪುಡಿ ಮಾಡಿ ಅಪಕ್ವ ಕಾಯಿಗಳ ಮೇಲೆ ಉದುರಿಸುತ್ತಾರೆ. ಇದರಿಂದ ಒಂದೇ ದಿನದಲ್ಲಿ ಅಪಕ್ವ ಕಾಯಿಗಳು ಹಣ್ಣಾಗಿರುವಂತೆ ಗೋಚರಿಸುತ್ತವೆ. ಈ ಹಣ್ಣುಗಳನ್ನು ಉಪಯೋಗಿಸುವುದರಿಂದ ಸಾರ್ವಜನಿಕರು ಕರುಳು ಬೇನೆ, ಆಮಶಂಕೆ, ಮುಂತಾದ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುತ್ತಿರುವುದಾಗಿ ತಿಳಿದುಬಂದಿದೆ. ಆದ್ದರಿಂದ ಸರಕಾರದವರು ಕೂಡಲೇ ಸಂಬಂಧಪಟ್ಟ ಇಲಾಖೆಗೆ ಆ ಬಗ್ಗೆ ತನಿಖೆ ನಡೆಸುವಂತೆ ತಿಳಿಸುವುದಲ್ಲದೆ ಸಾರ್ವಜನಿಕರ ಆರೋಗ್ಯಕ್ಕೆ ಮಾರಕವಾಗಿರುವ ಕಾರ್ಬೈಡ್ ರಾಸಾಯನಿಕದ ಉಪಯೋಗವನ್ನು ತಡೆಗಟ್ಟಿ ಅಂತಹ ಹಣ್ಣು ವ್ಯಾಪಾರಿಗಾರರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.